ಸ್ಥಿತಿ), **ನಿತ್ಯತ್ವ** (ಸದಾಕಾಲವೂ ಇರುವ ಸ್ಥಿತಿ), **ನಿರವಯವತ್ವ** (ನಿರಾಕಾರವಾಗಿರುವ ಸ್ಥಿತಿ), **ನಾನಾತ್ವ** (ಬಗೆಬಗೆಯಾಗಿರುವ ಸ್ಥಿತಿ) ಮೊದಲಾದ ಧರ್ಮಗಳೊಡನೆ ಸದಾಕಾಲವೂ ದುಃಖವಿಲ್ಲದೇ ಇರುವುದು. ದುಃಖವಿಲ್ಲದಿರುವ ಸ್ಥಿತಿಯೇ ಸ್ವಾಭಾವಿಕವಾದ ಸುಖಾನುಭವವೆಂದು ವೈಶೇಷಿಕ ದರ್ಶನದಲ್ಲಿ ಹೇಳಲಾಗಿದೆ. ಮಿಥ್ಯಾಜ್ಞಾನವೇ ಸಕಲ ಅನರ್ಥಗಳಿಗೂ ಕಾರಣ. ಆದುದರಿಂದ ಮಿಥ್ಯಾಜ್ಞಾನವು ದೂರವಾಗಬೇಕು. ಹಾಗಾಗಬೇಕಾದರೆ ಪದಾರ್ಥಗಳನ್ನು ಪರಾಮರ್ಶನಮಾಡಿ ತಿಳಿದುಕೊಳ್ಳಬೇಕು. ಅದಕ್ಕಾಗಿಯೇ, ಅಂದರೆ, ತತ್ತ್ವಜ್ಞಾನಕ್ಕಾಗಿಯೇ ಈ ದರ್ಶನದಲ್ಲಿ ಪದಾರ್ಥಗಳನ್ನು ವಿಶೇಷವಾಗಿ ಚರ್ಚಿಸಲಾಗಿದೆ.

### ವಿಷಯಗಳ ಪ್ರತಿಪಾದನೆ

ವೈಶೇಷಿಕರು ಬಾಹ್ಯಾರ್ಥಸತ್ತ್ವವಾದಿಗಳು. ಮನುಷ್ಯರ ಸಾಧಾರಣವಾದ ಅನುಭವವನ್ನು ಆಧರಿಸಿ ಈ ದರ್ಶನವು ನಿಂತಿದೆ ಎಂದು ಹೇಳಬಹುದು. 'ಪದಾರ್ಥ' ಎಂದರೆ ಪದದ ಅರ್ಥ. ಈ ದರ್ಶನದಲ್ಲಿ ಪದಾರ್ಥವೆಂಬ ಪದವನ್ನು ಜ್ಞೇಯ ವಿಷಯ ಎಂಬ ಅರ್ಥದಲ್ಲಿ ಉಪಯೋಗಿಸುತ್ತಾರೆ. ಜ್ಞೇಯ ಎಂದರೆ ತಿಳಿಯಬಹುದಾದ ವಿಷಯ. ಇದಕ್ಕೇ 'ಅರ್ಥ' ಎಂದು ಹೆಸರು. ತಿಳಿಯಬಹುದಾದದ್ದು, ಹೆಸರಿಸಬಹುದಾದದ್ದು – ಇವಕ್ಕೆ **ಪದಾರ್ಥ** ಎಂಬ ಪಾರಿಭಾಷಿಕ ಹೆಸರು. ವೈಶೇಷಿಕರು **ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ** ಎಂಬ ಏಳು ಪದಾರ್ಥಗಳನ್ನು ಪರಿಗಣಿಸುತ್ತಾರೆ

೧.**ದ್ರವ್ಯ:** ಪ್ರಪಂಚದಲ್ಲಿ ನಾವು ನೋಡುವ ಪದಾರ್ಥಗಳಲ್ಲಿ ಅನೇಕ ಗುಣ-ಕರ್ಮಗಳು ಕಾಣಿಸಿಕೊಳ್ಳುತ್ತವೆ. ಇವುಗಳಿಗೆ ಆಧಾರವಾದ **ಭೂಮಿ, ನೀರು, ಬೆಳಕು, ವಾಯು, ಆಕಾಶ, ಕಾಲ, ದಿಕ್ಕು, ಮನಸ್ಸು** ಮತ್ತು **ಆತ್ಮಗಳು** ದ್ರವ್ಯಗಳು.

೨.**ಗುಣ:** ಮಡಕೆ ಮುಂತಾದ ದ್ರವ್ಯಗಳಲ್ಲಿರುವ ರೂಪ, ರಸ, ಸ್ಪರ್ಶ, ಉದ್ದ, ಅಗಲ, ತೂಕ ಮುಂತಾದ ಹೆಚ್ಚು ಸ್ಥಿರವಾದ ಧರ್ಮಗಳೇ ಗುಣಗಳು.

೩.**ಕರ್ಮ:** ಮಡಕೆಯನ್ನು ಅಲ್ಲಾಡಿಸಿದಾಗ ಸ್ವಲ್ಪಹೊತ್ತು ಅಲುಗಾಡುವುದು, ಚಲನ ಮುಂತಾದವು ಕರ್ಮಗಳು. ನಮ್ಮ ಸಾಮಾನ್ಯವಾದ ಅನುಭವದಲ್ಲಿ ಕೂಡ ಬೇರೆ ಬೇರೆ ರೂಪಗಳಿರುವ ವಸ್ತುಗಳು ಬೀಳುವುದು, ಏಳುವುದು, ಓಡುವುದು ಮುಂತಾದವುಗಳ ಮೂಲಕ, ತಮ್ಮ ಸ್ವರೂಪದಿಂದ, ಭಿನ್ನವಾಗಿ ಗೋಚರಿಸುತ್ತವೆ.

### ೪. ಸಾಮಾನ್ಯ

ಹೀಗೆ ಸ್ಥೂಲವಾಗಿ ವಿಚಾರಮಾಡಿದಾಗ ಈ ಬಾಹ್ಯ ಜಗತ್ತು ದ್ರವ್ಯ, ಗುಣ, ಕರ್ಮಗಳೆಂಬ ಮೂರು ಪದಾರ್ಥಗಳ ಸಮುದಾಯರೂಪವಾಗಿದೆ. ಕಣಾದರು ಈ ಮೂರು ವಸ್ತುಗಳನ್ನೇ ಮೂರು ಪದಾರ್ಥಗಳೆಂದು ಹೇಳಿ, ಅವುಗಳ ಅಸ್ತಿತ್ವವು ನೇರವಾಗಿ ನಮ್ಮ ಬುದ್ಧಿಗೆ ಮೊದಲೇ ಗೋಚರಿಸುವುದರಿಂದ ಅವುಗಳಲ್ಲಿಯೇ **ಸತ್ತಾ** (ಸಾಮಾನ್ಯ) ಎಂಬ ಗುಣಧರ್ಮ ಇದೆಯೆಂದು ಹೇಳಿರುತ್ತಾರೆ.

ಪ್ರಪಂಚದಲ್ಲಿ ಅನೇಕ ವಸ್ತುಗಳು ಒಂದೇ ರೀತಿಯಿಂದ ಇರುತ್ತವೆ. ಆದುದರಿಂದ ನಾವು ಅವುಗಳನ್ನು ಒಂದೇ ಶಬ್ದದಿಂದ ವ್ಯವಹರಿಸುತ್ತೇವೆ. ಪ್ರಪಂಚದಲ್ಲಿರುವ ಎಲ್ಲ ಮಡಕೆಗಳನ್ನು 'ಘಟ'ವೆಂಬ ಒಂದೇ ಶಬ್ದದಿಂದ ವ್ಯವಹರಿಸುವುದನ್ನು ನೋಡಿದಾಗ ಈ ಎಲ್ಲ ಧರ್ಮಿಗಳಲ್ಲಿ (ಗುಣ ಹೊಂದಿದ ವಸ್ತುಗಳಲ್ಲಿ) ಅನುಸ್ಯೂತವಾದ ಒಂದೇ ಧರ್ಮವು ಇರಬೇಕೆಂದು ಅನ್ನಿಸುತ್ತದೆ. ಅದೇ **ಸಾಮಾನ್ಯ**. ಇದನ್ನು 'ಜಾತಿ' ಯೆಂದೂ ಕರೆಯುತ್ತಾರೆ. ಇದು ಪದಾರ್ಥಗಳಲ್ಲಿ ಬಾಹ್ಯವಾಗಿ ಇರುವ ಧರ್ಮ. ಇದು ನಿತ್ಯವಾಗಿದ್ದು ಅನೇಕ ವಸ್ತುಗಳಲ್ಲಿ ವ್ಯಾಪಿಸಿದ್ದರೆ ಅದನ್ನು 'ಜಾತಿ' ಯೆಂದು, ಹಾಗಿಲ್ಲದೆ ಕೆಲವೇ ವಸ್ತುಗಳಲ್ಲಿ ವ್ಯಾಪಿಸಿಕೊಂಡಿದ್ದರೆ, ಅದನ್ನು 'ಉಪಾಧಿ' ಯೆಂದೂ ಕರೆಯುತ್ತಾರೆ. ಉದಾಹರಣೆಗೆ ಮನುಷ್ಯತ್ವ (ಮನುಷ್ಯರಾಗಿ ಇರುವುದು) 'ಜಾತಿ'. ಉಪಾಧ್ಯಾಯತ್ವ (ಉಪಾಧ್ಯಾಯರಾಗಿ ಇರುವುದು) 'ಉಪಾಧಿ'.

'ಸಾಮಾನ್ಯ' ವು **ಪರ** ಮತ್ತು **ಅಪರ** ಎಂದು ಎರಡು ವಿಧ. ಹಿಂದೆ ತಿಳಿಸಿದ ದ್ರವ್ಯ, ಗುಣ, ಕರ್ಮಗಳಲ್ಲಿ ಇರುವ **ಸತ್ತಾ** ಎಂಬುದು ಪರಸಾಮಾನ್ಯವಾಗಿದೆ. ಇದನ್ನು ಬಿಟ್ಟರೆ ದ್ರವ್ಯತ್ತ್ವ, ಗುಣತ್ತ್ವ, ಕರ್ಮತ್ತ್ವಗಳು **ಪರಾಪರ** ಸಾಮಾನ್ಯಗಳು. ಏಕೆಂದರೆ, ಅವು ಪೃಥಿವೀತ್ತ್ವ ಮುಂತಾದವುಗಳಿಗಿಂತ ವ್ಯಾಪಕವಾಗಿಯೂ (ಹೆಚ್ಚಿನ ಸ್ಥಳಗಳಲ್ಲಿ ಇರುವವುಗಳು), ಸತ್ತೆಗಿಂತ ವ್ಯಾಪ್ಯವಾಗಿಯೂ (ಕಡಿಮೆ ಸ್ಥಳಗಳಲ್ಲಿರುವವುಗಳು) ಆಗಿವೆ. ಘಟತ್ತ್ವ ಮುಂತಾದ ಸಾಮಾನ್ಯಗಳು ಅಪರ ಸಾಮಾನ್ಯಗಳು.

### ೫. ಪರಮಾಣುಗಳು ಅಥವಾ ವಿಶೇಷ

ಪೃಥ್ವಿ ಮೊದಲಾದ ನಾಲ್ಕು ಭೂತಗಳ ಸೂಕ್ಷ್ಮಾಂಶಗಳನ್ನು ಪರಮಾಣುಗಳೆಂದು ಹೇಳಲಾಗಿದೆ. ಈ ಪರಮಾಣುಗಳಲ್ಲಿ ಒಂದೊಂದೂ ವಿಭಿನ್ನ ವಸ್ತುಗಳಾಗಿದ್ದು, ಇವುಗಳಲ್ಲಿ ಸಮಾನತೆಯೆಂಬುದಿಲ್ಲ. ಆದ್ದರಿಂದ ಪರಮಾಣುಗಳಲ್ಲಿ ಸಾಮಾನ್ಯವಿರುವುದಿಲ್ಲ; ವಿಶೇಷವಿರುತ್ತದೆ. ಘಟ, ಪಟ ಮೊದಲಾದ ಪದಾರ್ಥಗಳಿಗೆ ಅವುಗಳ ಅವಯವಗಳ ಭೇದದಿಂದ ವಿಭಿನ್ನತ್ವವನ್ನು ಹೇಳಲಾಗುತ್ತದೆ. ಪೃಥ್ವಿಯ ಎರಡು ಪರಮಾಣುಗಳಲ್ಲಿ ಪೃಥಿವೀತ್ತ್ವ, ದ್ರವ್ಯತ್ವ ಮುಂತಾದ ಧರ್ಮಗಳು ಸಮಾನವೇ ಆದಾಗ್ಯೂ, ವಿಭಿನ್ನವಾದ ಪರಮಾಣುಗಳಿಂದಾಗಿ ಅವುಗಳು ಸಮಾನವೆಂದೆನಿಸದೆ **'ವಿಶೇಷ'** ಎಂದೆನಿಸುತ್ತವೆ. ಹೀಗೆ ಎರಡು ಸಮಾನವಾದ ಪರಮಾಣುಗಳಲ್ಲಿ 'ವಿಶೇಷ'ವೆಂಬ ಪದಾರ್ಥವನ್ನು ಅಂಗೀಕರಿಸಿ ಅವುಗಳಲ್ಲಿ ಭೇದವನ್ನು ಸಾಧಿಸಲಾಗಿದೆ. ವಿಶೇಷವೆಂಬುದು ಪರಮಾಣುವಾದದಲ್ಲಿ ಸಾಧಿಸಿ ತೋರಿಸಬೇಕಾದ ಮುಖ್ಯವಾದ ಅಂಶ.

### ೬. ಸಮವಾಯ

ಒಂದು ಪದಾರ್ಥವು ಇನ್ನೊಂದು ಪದಾರ್ಥವನ್ನು ಸೇರಿ ಇರುವುದಾದರೆ ಅವೆರಡಕ್ಕೆ 'ಅಯುತಸಿದ್ಧ' ಗಳೆಂದು ಹೆಸರು. ಅಯುತಸಿದ್ಧಗಳಿಗೆ ಇರುವ ಸಂಬಂಧವನ್ನು **ಸಮವಾಯ** ಎಂದು ಕರೆಯುತ್ತಾರೆ. ಸಂಯೋಗವು ದ್ರವ್ಯಗಳಿಗೆ ಮಾತ್ರ. ಸಮವಾಯವು ತಂತು ಮತ್ತು ಬಟ್ಟೆ ಮುಂತಾದ ಅವಯವ ಮತ್ತು ಅವಯವಿಗಳಿಗೂ, ರೂಪ ಮುಂತಾದ ಗುಣಗಳು ಮತ್ತು ಗುಣಿಗಳಿಗೂ (ಗುಣವನ್ನು ಹೊಂದಿರುವಂಥವು), ಚಲನಾದಿ ಕ್ರಿಯೆ ಮತ್ತು ವಸ್ತಗಳಿಗೂ, ಘಟತ್ವಾದಿ ಜಾತಿ ಮತ್ತು ಘಟಗಳಿಗೂ ಇರುತ್ತದೆ.